ದಿನಾಂಕ : 01-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

24. ಆರೋಪಿತರು ಮೃತ ಬಸವರಾಜ ದೊಡಮನಿ ಅವರಿಗೆ ಹಲ್ಲೆ ಮಾಡುವ ಸಮಯದಲ್ಲಿ ಮುಖಕ್ಕೆ ಕಾರದ ಪುಡಿಯನ್ನು ಎರಚಿದ್ದು ಅದು ಕೆಳಗೆ ಮಣ್ಣಿನ ನೆಲದ ಮೇಲೆ ಬಿದ್ದಿತ್ತು. ಪೋಲಿಸರು ಅದನ್ನು ತೆಗೆದು ಒಂದು ಪ್ಯಾಕೇಟ್‌ನಲ್ಲಿ ಹಾಕಿದರು. ಈ ಜಾಗವನ್ನು ಶ್ರೀಶೈಲ ದೊಡಮನಿ ಎನ್ನುವವರು ಪೋಲಿಸರಿಗೆ ತೋರಿಸಿದ್ದು, ದಿನಾಂಕಃ 04-03-2020 ರಂದು ಬೆಳಗ್ಗೆ ಪಂಚನಾಮೆ ಮಾಡುವ ಸಮಯದಲ್ಲಿ ಪೋಲಿಸರು ಅದನ್ನು ಸಂಗ್ರಹಿಸಿಕೊಂಡು ಒಂದು ಖಾಕಿ ಬಣ್ಣದ ಪ್ಯಾಕೇಟ್‌ನಲ್ಲಿ ಹಾಕಿಕೊಂಡು ಅದರ ಮೇಲೆ ಒಂದು ಚೀಟಿಯನ್ನು ಅಂಟಿಸಿ ನನ್ನ ಸಹಿಯನ್ನು ಮಾಡಿಸಿಕೊಂಡು ಪ್ಯಾಕ ಮಾಡಿ ಸೀಲ ಮಾಡಿ ಮಾಡಿದರು. ಅದರ ಮೇಲೆ ಇರುವ ನನ್ನ ಸಹಿಯನ್ನು ನೋಡಿದರು ಗುರುತಿಸುತ್ತೇನೆ.

25. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿಳಿ ಬಣ್ಣದ ಬಟ್ಟೆಯ ಬ್ಯಾಗನ್ನು ತೆಗೆದು ನೋಡಲಾಗಿ ಅದರಲ್ಲಿ ಖಾಕಿ ಬಣ್ಣದ ಪ್ಯಾಕೇಟ ಇದ್ದು, ಅದರ ಮೇಲೆ ಸಾಕ್ಷಿಯ ಸಹಿ ಇರುವ ಚೀಟಿ ಇದ್ದು, ಆ ಪ್ಯಾಕೇಟನ್ನು ತೆರೆದು ನೋಡಲಾಗಿ ಅದರಲ್ಲಿ ಕಾರ ಪುಡಿ ಮಿಶ್ರಿತ ಮಣ್ಣು ಇರುವುದು ಕಂಡುಬಂತು, ಅದನ್ನು ಮು.ಮಾ.16 ಎಂದು ಗುರುತಿಸಲಾಯಿತು.

26. 3 ನೇ ಆರೋಪಿ ರೇಣುಕಾ ಇವರು ಮೃತ ಬಸವರಾಜ ದೊಡಮನಿ ಅವರ ನೀಲಿ ಬಣ್ಣದ ಇನಫಿನಿಕ್ಸ ಕಂಪನಿಯ ಮೊಬೈಲ ಪೋನನ್ನು ಬಟ್ಟೆ ಜೊತೆಗೆ ಇಟ್ಟಿದ್ದು ಅದನ್ನು ಪೋಲಿಸರಿಗೆ ತೆಗೆದುಕೊಟ್ಟರು, ಅದನ್ನು ಪೋಲಿಸರಿಗೆ ನಮಗೆ ತೋರಿಸಿ ಒಂದು ಪೇಪರನಲ್ಲಿ ಹಾಕಿ ಸುತ್ತಿ ಅರಗಿನ ಸೀಲ ಮಾಡಿ ನನ್ನ ಸಹಿ ಪಡೆದುಕೊಂಡರು. ಈಗ ನಾನು ನೋಡುತ್ತಿರು

ಪೊಟ್ಟಣದ ಮೇಲೆ ನನ್ನ ಸಹಿ ಇದೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿರುವ ನೀಲಿ ಬಣ್ಣದ ಇನಫಿನಿಕ್ಸ ಮೊಬೈಲನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ.17 ಎಂದು ಗುರುತಿಸಲಾಯಿತು. ಅದೇ ದಿನ ಅದೇ ಸಮಯದಲ್ಲಿ 3 ನೇ ಆರೋಪಿ ಗುಲಾಬಿ ಮತ್ತು ಹಸಿರು ಬಣ್ಣ ಮಿಶ್ರಿತವಾಗಿರುವ ಸೀರೆಯನ್ನೂ ಸಹ 3 ನೇ ಆರೋಪಿ ರೇಣುಕಾ ಅವರು ಪೋಲಿಸರ ಮುಂದೆ ಹಾಜರು ಮಾಡಿದ್ದರು. ಆ ಸೀರೆಯಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಆಗಿದ್ದು ಕಂಡುಬಂತು, ಅದನ್ನು ಪೋಲಿಸರು ನಮಗೆ ತೋರಿಸಿ ಜಪ್ತು ಮಾಡಿಕೊಂಡರು.

27. ಬಿಳಿಯ ಬಣ್ಣದ ಬಟ್ಟೆಯ ಭಾಂಗಿಯ ಮೇಲೆ RFSL ಸೀಲು ಇರುವ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿರುವ ಗುಲಾಬಿ ಮತ್ತು ಹಸಿರು ಬಣ್ಣ ಮಿಶ್ರಿತವಾಗಿರುವ ಸೀರೆಯನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಮು.ಮಾ.18 ಎಂದು ಗುರುತಿಸಲಾಯಿತು.

28. ಪಂಚನಾಮೆ ಸಮಯದಲ್ಲಿ ಹಾಜರಿದ್ದು, ಪೋಲಿಸರಿಗೆ ವಸ್ತುಗಳನ್ನು ನೀಡಿದ್ದಂತಹ ಮೂರು ಜನ ಆರೋಪಿತರನ್ನು ಈಗ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿ ನ್ಯಾಯಾಲಯದಲ್ಲಿ ಹಾಜರಿರುವ ಮೂರು ಜನ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲು:ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಚಾಸಾಃ 5 ವಿ.ಪಿ.ಈಟಿ ಮತ್ತು ನಾನು ಬೇರೆ ಬೇರೆ ಇಲಾಖೆಯಲ್ಲಿ ಕೆಲಸ ಮಾಡುತ್ತೇವೆ. ನಾನು ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ ಮತ್ತು ಚಾಸಾಃ 5 ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. 2020 ರಲ್ಲಿ ಎರಡೂ ಇಲಾಖೆಗಳು ಕಿತ್ತೂರಿನಲ್ಲಿ ಇತ್ತು ಎನ್ನುವುದು ಸರಿ. ನನ್ನ ಮೇಲಾಧಿಕಾರಿಗಳು ಹಿರಿಯ ಸಹಾಯಕ

ತೋಟಾಧಿಕಾರಿಗಳಾಗಿರುತ್ತಾರೆ. ನನ್ನ ಹಿರಿಯ ಅಧಿಕಾರಿಗಳು ಪೋಲಿಸರಿಂದ ನಮಗೆ ಮಾಹಿತಿ ಬಂದಿದೆ, ಆ ಕಾರಣ ನೀವು ಪೋಲಿಸ ಠಾಣೆಗೆ ಹೋಗಿ ಹಾಜರಾಗಿ ಎಂದು ನನ್ನ ಮೇಲಾಧಿಕಾರಿಗಳು ನನಗೆ ಆದೇಶ ನೀಡಿರಲಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನನಗೆ ತಹಶೀಲ್ದಾರವರು ನನಗೆ ಪೋನ ಮಾಡಿ ಆದೇಶ ಮಾಡಿದ್ದರು ಎಂದು ಹೇಳಿದ್ದಾರೆ. ನನ್ನನ್ನು ಈ ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ತಹಶೀಲ್ದಾರವರು ನಮ್ಮ ಕಚೇರಿಗೆ ಲಿಖಿತವಾಗಿ ಪತ್ರ ವ್ಯವಹಾರ ಮಾಡಿರುವುದಿಲ್ಲ.

2. ಪ್ರತಿಯೊಂದು ಸಾರ್ವಜನಿಕ ಅಧಿಕಾರಿಯು ತಮ್ಮ ಕೆಲಸದ ಅವಧಿಯಲ್ಲಿ ಕಚೇರಿಯಿಂದ ಹೊರಗೆ ಹೋಗಬೇಕಾದರೆ ಮುವ್‌ಮೆಂಟ್ ರಜಿಸ್ಟರನಲ್ಲಿ ನಮೂದು ಮಾಡಬೇಕು ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನಾನು ಎಕ್ಸಿಕೇಟಿವ್ ವರ್ಕ ಮಾಡುವುದರಿಂದ ನನಗೆ ಮುವ್‌ಮೆಂಟ್ ರಜಿಸ್ಟರ ಇರುವುದಿಲ್ಲ ಎಂದು ಹೇಳಿದ್ದಾರೆ. ನಾನು ಫೀಲ್ಡ ವರ್ಕ ಮಾಡುವುದರಿಂದ ಮುವ್‌ಮೆಂಟ್ ರಜಿಸ್ಟರ ಇರುವುದಿಲ್ಲ ಎಂದು ಹೇಳಿದ್ದಾರೆ. ದಿನಾಂಕಃ 04-03-2020 ರ ಮುವ್‌ಮೆಂಟ್ ರಜಿಸ್ಟರನ ಪ್ರತಿಯನ್ನು ಕಿತ್ತೂರು ಪೋಲಿಸರು ತೆಗೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ತಾಲೂಕು ದಂಡಾಧಿಕಾರಿಯವರು ನಮಗೆ ಪೋನ ಮೂಲಕ ನೇರವಾಗಿ ಮಾಡಿದ ಆದೇಶವನ್ನು ಪಾಲಿಸಲೇ ಬೇಕಾಗುತ್ತದೆ ಎಂದು ಹೇಳಿದ್ದಾರೆ.

3. ದಿನಾಂಕಃ 04-03-2020 ರಂದು ಯಾವ ಯಾವ ಊರುಗಳಿಗೆ ಭೇಟಿ ನೀಡಬೇಕಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇತ್ತು. ತಹಶೀಲ್ದಾರವರು ಮಾಡಿದ ಆದೇಶವನ್ನು ನಾನು ನನ್ನ ಮೇಲಾಧಿಕಾರಿಯವರಿಗೆ ತಿಳಿಸಬೇಕಾಗುತ್ತದೆ ಎನ್ನುವುದು ಸರಿ.

4. ನಾನು ಡಿ.ವೈ.ಎಸ್.ಪಿ ಅವರನ್ನು ಕಚೇರಿಯಲ್ಲಿ ಭೇಟಿ ಆದ ನಂತರ ಅವರು ಅಲ್ಲಿ ನನಗೆ ಯಾವುದೇ ವಸ್ತುಗಳನ್ನು ಕಚೇರಿಯಲ್ಲಿ ತೋರಿಸಿರುವುದಿಲ್ಲ. ಅವರು ನನ್ನನ್ನು ನೇರವಾಗಿ ಬಸರಕೋಡ ಗ್ರಾಮಕ್ಕೆ ಕರೆದುಕೊಂಡು ಹೋದರು. ಬಸರಕೋಡ ಗ್ರಾಮದಿಂದ

ಡಿ.ವೈ.ಎಸ್.ಪಿ ಕಚೇರಿಗೆ ವಾಪಸ್ ಬಂದ ನಂತರ ಡಿ.ವೈ.ಎಸ್.ಪಿ ಅವರ ಟೇಬಲ ಮೇಲೆ 5 ಮೊಬೈಲಗಳು ಇದ್ದವು.

5. ದಿನಾಂಕಃ 04-03-2020 ರಂದು ನನ್ನ ಮತ್ತು 3 ಜನ ಆರೋಪಿತರೊಂದಿಗೆ ಮಾತುಕತೆ ಆಗಿರುವುದಿಲ್ಲ. ಪೋಲಿಸರ ಮಾಹಿತಿ ಪ್ರಕಾರ ಪಂಚನಾಮೆ ಆಗಿದೆ ಎನ್ನುವುದು ಸರಿ. ಸ್ಥಳದಲ್ಲಿ ಬಿದ್ದಿದ್ದ 10 ನಂಬರ ಚಪ್ಪಲಿಯನ್ನು ಶ್ರೀಶೈಲ ಅವರು ಅದು ತಮ್ಮ ಅಣ್ಣ ಮೃತ ಬಸವರಾಜ ಅವರದು ಎಂದು ಗುರುತಿಸಿದ್ದರು. ಅದನ್ನು ಖಚಿತಪಡಿಸಿಕೊಳ್ಳಲು ಪೋಲಿಸರು ಮನೆಯಲ್ಲಿದ್ದಂತಹ ಬೇರೆ ಚಪ್ಪಲಿಗಳೊಂದಿಗೆ ಹೊಂದಿಸಿ ನೋಡಿರುವುದಿಲ್ಲ ಎಂದು ಸೂಚಿಸುವುದು ಸರಿ.

6. ಪೋಲಿಸರು ಪಂಚನಾಮೆ ಮಾಡಿ ಮು.ಮಾ.11 ರಿಂದ ಮು.ಮಾ.18 ರ ವಸ್ತುಗಳನ್ನು ಜಪ್ತು ಮಾಡಿಕೊಂಡ ಸ್ಥಳ ಯಾರಿಗೆ ಸೇರಿದ್ದು ಎನ್ನುವ ಬಗ್ಗೆ ಪೋಲಿಸರು ದಾಖಲೆಗಳನ್ನು ನನಗೆ ತೋರಿಸಿರುವುದಿಲ್ಲ. ನಿಪಿ-17 ಪಂಚನಾಮೆ ಸಮಯದಲ್ಲಿ ಪೋಲಿಸರು ಸ್ಥಳೀಯ ಪಂಚಾಯತಿ ಅಧಿಕಾರಿಗಳನ್ನು ಕರೆಸಿರುವುದಿಲ್ಲ.

7. ಮು.ಮಾ.3 ಚಪ್ಪಲಿ ಬಿದ್ದಿದ್ದ ಸ್ಥಳ ಹಾಗೂ ಮನೆಯ ಹಿತ್ತಲಿನ ಅಕ್ಕಪಕ್ಕದಲ್ಲಿ ಬೇರೆ ಬೇರೆ ವಾಸದ ಮನೆಗಳು ಇವೆ ಎನ್ನುವುದು ಸರಿ. ಶವ ಬಿದ್ದಿದ್ದ ಸ್ಥಳದಿಂದ 50-60 ಅಡಿ ಅಂತರದಲ್ಲಿ ಹಿತ್ತಲು ಮನೆ ಇದೆ ಎನ್ನುವುದು ಸರಿ.

8. ನಿಪಿ-17 ಪಂಚನಾಮೆ ಪ್ರಕ್ರಿಯೆ ಮುಗಿಸಿಕೊಂಡು ಡಿ.ವೈ.ಎಸ್.ಪಿ ಕಚೇರಿಗೆ ಬಂದಾಗ ಸಂಜೆ 4:30 ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ಡಿ.ವೈ.ಎಸ್.ಪಿ ಕಚೇರಿಯಲ್ಲಿ ನನ್ನ ಸುಮಾರು 10 ರಿಂದ 15 ಸಹಿ ಮಾಡಿಸಿಕೊಂಡರು ಎನ್ನುವುದು ಸರಿ. ನಾನು ಸಹಿ ಮಾಡಿದ ಸಮಯದಲ್ಲಿ ಚಾಸಾಃ 5 ರವರು ಸಹ ಸಹಿ ಮಾಡಿದರು ಎನ್ನುವುದು ಸರಿ.

9. ನಾನು ಹೇಳಿದಂತಹ ನಿಪಿ-17 ಪಂಚನಾಮೆ ಪ್ರಕ್ರಿಯೆಯನ್ನು ಡಿ.ವೈ.ಎಸ್.ಪಿ ರವರು ಮಾಡಿಲ್ಲ, ಮು.ಮಾ.10 ರಿಂದ ಮು.ಮಾ.18 ರ ವಸ್ತುಗಳನ್ನು ಡಿ.ವೈ.ಎಸ್.ಪಿ ರವರು ಜಪ್ತು ಮಾಡಿಕೊಂಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಎಲ್ಲಾ ಕಾರ್ಯಕ್ರಮಗಳಿಗೂ ಡಿ.ವೈ.ಎಸ್.ಪಿ ರವರು ಸಹಾಯ ಮಾಡುತ್ತಾರೆ ಎನ್ನುವ ಕಾರಣಕ್ಕೆ, ಡಿ.ವೈ.ಎಸ್.ಪಿ ರವರಿಗೆ ಸಹಾಯ ಮಾಡಲು ಅವರು ಹೇಳಿದಂತೆ ನಾನು ಸಹಿಯನ್ನು ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿ 1, ಆರೋಪಿ 2 ಮತ್ತು ಆರೋಪಿ 3 ರವರು ವಸ್ತುಗಳನ್ನು ಹಾಜರು ಮಾಡಿದರು ಎಂದು, ಅವುಗಳನ್ನು ಡಿ.ವೈ.ಎಸ್.ಪಿ ರವರು ಜಪ್ತು ಮಾಡಿಕೊಂಡರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಡಿ.ವೈ.ಎಸ್.ಪಿ ರವರ ಕಚೇರಿ ಬೈಲಹೊಂಗಲದಲ್ಲಿ ಇದೆ ಎನ್ನುವುದು ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.